<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,</u>
<u>ನ್ಯಾಯಾಲಯ,ಹೊಸದುರ್ಗ.</u>

ಅಸಲು ದಾವಾ ಸಂಖ್ಯೆ **383/2019** ದಿನಾಂಕ: **16.07.2025.**

ಪಿ.ಡಬ್ಲ್ಯು: **1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿಯ ಪರ ಶ್ರೀ ಬಿ ಸಿ ಎಸ್ ವಕೀಲರಿಂದ**

5. ನನ್ನ ತಾಯಿ ದೇವಿಗೆರೆ ಗ್ರಾಮದಲ್ಲಿ ವಾಸ ಇರುತ್ತಾರೆ ಎಂಬುದರ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ವಾಸದ ದೃಡೀಕರಣ ಪತ್ರ ಹಾಜರು ಮಾಡಿರುವುದಿಲ್ಲ. ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ನನ್ನ ವಿವಾಹ ಆಗಿರುತ್ತದೆ . ನನ್ನ ಗಂಡನ ಹೆಸರು ವೀರಭದ್ರಯ್ಯ . ಅವರು ಹೊಳೆಬೆಳಗಲು ಗ್ರಾಮ , ಶಿವಮೊಗ್ಗ ತಾಲ್ಲೂಕು . ನಮ್ಮ ವಿವಾಹಕ್ಕೆ ಬರಬೇಕೆಂದು ನನ್ನ ಮಾವ ಓಂಕಾರಯ್ಯರವರ ಮೂಲಕ ಪ್ರತಿವಾದಿಯನ್ನು ಆಹ್ವಾನಿಸಿದ್ದೆವು. ಯಾವ ದಿನಾಂಕದಂದು ಆಹ್ವಾನ ನೀಡಿದ್ದೆವು ಎಂದು ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಯ ಮಗಳು ಆಗದ ಕಾರಣ ನಾನು ಅವರನ್ನು ನನ್ನಮದುವೆಗೆ ಕರೆದಿರುವುದಿಲ್ಲ ಹಾಗೂ ಅವರು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

6. ನನ್ನ ತಾಯಿ ಪ್ರತಿವಾದಿಯನ್ನು ತೊರೆದು ಹೋದ ನಂತರ ಎಂದಿಗೂ ಅವರ ನಡುವೆ ಹೊಂದಾಣಿಕೆ ಏರ್ಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಹೊಂದಾಣಿಕೆಯಿಂದ ಇರಲು ನನ್ನ ತಾಯಿ ಪುಷ್ಪ ಒಪ್ಪಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಿಷಯಗಳು ನಾನು ಜನಿಸುವ ಮೊದಲು ನಡೆದಿರುವ ಕಾರಣ ನನಗೆ ಅದರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಪ್ರತಿವಾದಿ ಜೊತೆ ಹೊಂದಾಣಿಕೆಯಿಂದ ಇರದೇ ತೊರದು ಹೋದ ಕಾರಣ ಪ್ರತಿವಾದಿಯನ್ನು ಅವರ ಮಾವ ಒಪ್ಪಿಸಿ ರಂಗಮ್ಮಎಂಬುವವರೊಂದಿಗೆ ವಿವಾಹ ಮಾಡಿರುತ್ತಾರೆ ಎಂದರೆ ಸುಳ್ಳು. ಅವರಿಗೆ ಹರೀಶ್ ಮತ್ತು ಪ್ರಜ್ವಲ್ ಎಂಬ ಇಬ್ಬರು ಗಂಡು ಮಕ್ಕಳು ಇರುತ್ತಾರೆ ಎಂದರೆ ಸುಳ್ಳು. ಅವರ ಪೈಕಿ ಹರೀಶ ಪ್ರಾಪ್ತ ವಯಸ್ಕನಾಗಿರುತ್ತಾನೆ ಎಂದರೆ ಸುಳ್ಳು.

7. ನನ್ನ ತಾಯಿ ಪುಷ್ಪ ಪ್ರತಿವಾದಿಯನ್ನು ಮದುವೆ ಆಗಿರುವ ಒಂದೇ ಕಾರಣದಿಂದ ಪ್ರತಿವಾದಿಯ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನುದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪುಷ್ಪ ಮತ್ತು ಪ್ರತಿವಾದಿಯ ವೈವಾಹಿಕ ಸಂಬಂಧದಿಂದ ಜನಿಸದ ಕಾರಣ ನಾನು ಪ್ರತಿವಾದಿಯ ಮಗಳಾಗಿರುವುದಿಲ್ಲ ಎಂದರೆ ಸುಳ್ಳು. ನನಗೂ ಪ್ರತಿವಾದಿಗೂ ಹಾಗೂ ದಾವಾ ಸ್ವತ್ತಿಗೂ ಯಾವುದೇ ರೀತಿಯ ಹಕ್ಕು ಅಧಿಕಾರ ಮತ್ತು ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

8. ಹಿಂದಿನ ಕಾಲದಲ್ಲಿ ಹೆಣ್ಣು ಮಕ್ಕಳ ವಿವಾಹ ಮಾಡುವುದು ಕಷ್ಟಕರವಾಗಿತ್ತು ಎಂದರೆ ಸರಿ. ಆದ ಕಾರಣ ಒತ್ತಾಯದಿಂದ ಪ್ರತಿವಾದಿಗೆ ಪುಷ್ಪ ರವರನ್ನು ಕೊಟ್ಟು ಅವರ ಇಚ್ಛೆಯ ವಿರುದ್ದ ವಿವಾಹ ಮಾಡಲಾಗಿತ್ತು ಎಂದರೆ ಸುಳ್ಳು. ನನ್ನ ತಾಯಿ ಪುಷ್ಪವತಿ ಪ್ರತಿವಾದಿಯನ್ನು ಸುಮಾರು 24 ವರ್ಷಗಳ ಹಿಂದೆಯೆ ತೊರೆದು ಪ್ರತ್ಯೇಕ ಹೋಗಿರುತ್ತಾರೆ ಎಂದರೆ ಸುಳ್ಳು. ನನ್ನ ತಾಯಿ ಪ್ರತಿವಾದಿಯನ್ನು ತೊರೆದು ಬೇರೆಯಾದ 5-6 ವರ್ಷಗಳ ನಂತರ ನಾನು ಜನಿಸಿರುತ್ತೇನೆ ಎಂದರೆ ಸುಳ್ಳು. ದಾವಾ ಆಸ್ತಿಯನ್ನು ಲಪಟಾಯಿಸು ಉದ್ದೇಶದಿಂದ ನಾನು ಮತ್ತು ನನ್ನ ತಾಯಿ ಶರಿಕ್ಕಾಗಿ ಪ್ರತಿವಾದಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.